# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**

**www.souharda.coop, Ph: 080-23378375-80, Email:souharda@souharda.coop**


**ಸಂಖ್ಯೆ: ಸಂ.ಸ/ಸಿ.ನೇ/ಅ–01/2021–22** **ದಿನಾಂಕ: 20.07.2021**

## ಅಧಿಸೂಚನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರಲ್ಲಿ ಖಾಲಿ ಇರುವ ಹಾಗೂ ಅಗತ್ಯವಿರುವ ವಿವಿಧ ವೃಂದಗಳಲ್ಲಿನ ಹುದ್ದೆಗಳ ನೇಮಕಾತಿಯನ್ನು ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಉಪವಿಧಿ ಹಾಗೂ ಸಿಬ್ಬಂದಿ ಸೇವಾನಿಯಮಾವಳಿಯ ನೇರ ನೇಮಕಾತಿ ನಿಯಮ ಹಾಗೂ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ನೇಮಕಾತಿ ಸಮಿತಿಯ ನಿರ್ಣಯದಂತೆ ಭರ್ತಿ ಮಾಡಲು ಅಂಚೆ/ಕೋರಿಯರ್/ಖುದ್ದಾಗಿ ಸಲ್ಲಿಸುವ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದಿನಾಂಕ:18.07.2021ರ ನೇಮಕಾತಿ ಸಮಿತಿಯು ಅನುಮೋದಿಸಿದಂತೆ ನೇರ ನೇಮಕಾತಿಗೆ ಪರಿಗಣಿಸಲಾದ ಹುದ್ದೆಗಳು ಮತ್ತು ವಿದ್ಯಾರ್ಹತೆ ವಿವರ.

| ಕ್ರ.ಸಂ | ಹುದ್ದೆಗಳ ಹೆಸರು | ಹುದ್ದೆಗಳ ಸಂಖ್ಯೆ | ಅರ್ಹತೆ |
|---|---|---|---|
| 1 | ಸಿವಿಲ್ ಇಂಜಿನಿಯರ್(ವ್ಯವಸ್ಥಾಪಕ ಶ್ರೇಣಿ) | 2 | ಸಿವಿಲ್ ಇಂಜಿನಿಯರ್ ವಿಷಯದಲ್ಲಿ ಪದವಿ, ಕನಿಷ್ಠ ಎರಡು ವರ್ಷ ಅನುಭವ ಹೊಂದಿದವರಿಗೆ ಆದ್ಯತೆ. |
| 2 | ಸಹಾಯಕರು | 16 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೆ ವಿಷಯದಲ್ಲಿ ಪದವಿ ಅಥವಾ ಸಹಕಾರ ವಿಷಯದಲ್ಲಿ ಪದವಿ. |
| 3 | ಉಪ ಸಿಬ್ಬಂದಿ ಕಮ್ ವಾಹನ ಚಾಲಕ | 6 | ಕರ್ನಾಟಕ ಪ್ರೌಢಶಿಕ್ಷಣ ಪರಿಕ್ಷಾ ಮಂಡಲಿ ನಡೆಸುವ ಎಸ್.ಎಸ್.ಎಲ್.ಸಿ. ಅಥವಾ ಅಂಗೀಕೃತ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು, ಸಕ್ಷಮ ಪ್ರಾಧಿಕಾರದಿಂದ ಮೋಟಾರ್ ವಾಹನ ಚಾಲನಾ ಪರವಾನಿಗೆ ಪಡೆದಿರತಕ್ಕದ್ದು. ಲಘುವಾಹನ ಚಾಲಕರಾಗಿ ಕನಿಷ್ಠ ಎರಡು ವರ್ಷ ಅನುಭವ ಹೊಂದಿದವರಿಗೆ ಆದ್ಯತೆ. |
| 4 | ಉಪ ಸಿಬ್ಬಂದಿ (ಪ್ಯೂನ್/ಅಟೆಂಡರ್) | 6 | ಕರ್ನಾಟಕ ಪ್ರೌಢಶಿಕ್ಷಣ ಪರಿಕ್ಷಾ ಮಂಡಲಿ ನಡೆಸುವ ಎಸ್.ಎಸ್.ಎಲ್.ಸಿ. ಅಥವಾ ಅಂಗೀಕೃತ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |
| 5 | ಸ್ವೀಪರ್ | 2 | ಏಳನೇ ತರಗತಿ ಉತ್ತೀರ್ಣರಾಗಿರತಕ್ಕದ್ದು, ಕನ್ನಡ ಓದಲು ಮತ್ತು ಬರೆಯಲು ಬರತಕ್ಕದ್ದು. |

**ಸಾಮಾನ್ಯ ಅರ್ಹತೆ ನಿಯಮಗಳು :**

1) ಸಿವಿಲ್ ಇಂಜಿನಿಯರ್, ಸಹಾಯಕ ಹುದ್ದೆಗಳಿಗೆ ಗಣಕಯಂತ್ರ ಪರಿಣಿತಿ ಮತ್ತು ಕನ್ನಡ ಓದುವ, ಬರೆಯುವ ಮತ್ತು ಮಾತನಾಡುವ ಪರಿಣಿತಿ ಕಡ್ಡಾಯ.
2) ಸಂಯುಕ್ತ ಸಹಕಾರಿಯು ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಸರ್ಕಾರದಿಂದ ಯಾವುದೇ ಸಹಾಯಧನ ಪಡೆಯದೆ ಇರುವದರಿಂದ ಯಾವುದೇ ಮೀಸಲಾತಿ ಅನ್ವಯವಾಗುವುದಿಲ್ಲ.
3) ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಬಂದಿಸಿದ ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆಯನ್ನು ಹಾಗೂ ಅನುಭವವನ್ನು ಅಭ್ಯರ್ಥಿಗಳು ಹೊಂದಿರಬೇಕು,
4) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ಖಾಲಿ ಇರುವ ಈ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಂಬಂಧ ನೇಮಕಾತಿ ಪ್ರಕ್ರಿಯೆಯ ಪೂರ್ಣ ವಿವರ ಹಾಗೂ ನಿಗದಿತ ಅರ್ಜಿಗಳನ್ನು ಸಂಯುಕ್ತ ಸಹಕಾರಿಯ ಜಾಲ ತಾಣ website: www.souharda.coop ರಲ್ಲಿ ನೀಡಿದ್ದು, ಅಂಚೆ/ಕೋರಿಯರ್/ಖುದ್ದಾಗಿ ಸಲ್ಲಿಸುವ ಮೂಲಕ ಅರ್ಜಿ ಸಲ್ಲಿಸತಕ್ಕದ್ದು.
5) ಸಂಯುಕ್ತ ಸಹಕಾರಿಯಲ್ಲಿ ಗುತ್ತಿಗೆ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಸಹಾಯಕ ಹುದ್ದೆಯ ನೇಮಕಾತಿ ಪ್ರಕ್ರಿಯೆಯಲ್ಲಿ ಶೇ.70 ರಷ್ಟು ಮತ್ತು ಐದು ಕೋಟಿಗಿಂತ ಹೆಚ್ಚಿನ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳಲ್ಲಿ ವ್ಯವಸ್ಥಾಪಕ/ಅಧಿಕಾರಿ ಹಾಗೂ ಮೇಲ್ಪಟ್ಟ ಹುದ್ದೆಯಲ್ಲಿ ಕನಿಷ್ಠ 5 ವರ್ಷ ಅನುಭವ ಹೊಂದಿರುವ ನೌಕರರಿಗೆ ಶೇ.30% ರಷ್ಟು ಅವಕಾಶ ನಿಗದಿಪಡಿಸಿದೆ.
6) ಸಂಯುಕ್ತ ಸಹಕಾರಿಯಲ್ಲಿ ಗುತ್ತಿಗೆ/ದಿನಗೂಲಿ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ನೌಕರರಿಗೆ ಈ ನೇಮಕಾತಿ ಪ್ರಕ್ರಿಯೆಯಡಿಯಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಸಂಯುಕ್ತ ಸಹಕಾರಿಯಲ್ಲಿ ಗುತ್ತಿಗೆ/ದಿನಗೂಲಿ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವಾವಧಿಯನ್ನು, ವಯೋಮಿತಿ ವಿಸ್ತರಣೆಗೆ ಪರಿಗಣಿಸಲಾಗುವುದು.

## ನೇಮಕಾತಿ ಪ್ರಕ್ರಿಯೆಯ ವಿವರಗಳು

**1. ಅರ್ಜಿಸಲ್ಲಿಸುವ ವಿಧಾನ :**

1) ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಗಳನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್ (www.souharda.coop) ನಿಂದ ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿ, ಅಗತ್ಯ ದಾಖಲಾತಿಗಳೊಂದಿಗೆ ನಿಯಮಿತ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಮೇಲ್ಕಂಡ ವಿಳಾಸದಲ್ಲಿರುವ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ತಲುಪುವಂತೆ ಕಳುಹಿಸತಕ್ಕದ್ದು.
2) ನಿಗದಿತ ಅರ್ಜಿ ಶುಲ್ಕವನ್ನು **'ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ** ನಿ., **(Karnataka State Souharda Federal Cooperative Ltd.,)** ಈ ಹೆಸರಿನಲ್ಲಿ ಬೆಂಗಳೂರಿನಲ್ಲಿ

ಸಂದಾಯವಾಗುವಂತೆ ಡಿ.ಡಿ. (ಡಿಮ್ಯಾಂಡ್ ಡ್ರಾಫ್ಟ್) ತೆಗೆದು ಅರ್ಜಿಯೊಂದಿಗೆ ಲಗತ್ತಿಸಿ ಕಳುಹಿಸತಕ್ಕದ್ದು.

3) ಅರ್ಜಿಯಲ್ಲಿ ನಮೂದಿಸುವ ಇ–ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು, ನೇಮಕಾತಿ ಪ್ರಕ್ರಿಯೆಯ ಸಂವಹನಕ್ಕೆ ಪರಿಗಣಿಸಲಾಗುವುದು.

4) ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ವಯವೇ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು. ಅಪೂರ್ಣ ಹಾಗೂ ತಪ್ಪು ಮಾಹಿತಿಗಳನ್ನೊಳಗೊಂಡ, ಅರ್ಜಿ ಶುಲ್ಕದ ಡಿಮಾಂಡ್ ಡ್ರಾಫ್ಟ್ ಹೊಂದಿರದ, ನಿಗದಿತ ಸಮಯದ ನಂತರ ತಲುಪಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**2. ಅರ್ಜಿ ಸಲ್ಲಿಸುವ ಅವಧಿ**

ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ : 20.07.2021 – ಬೆಳಿಗ್ಗೆ 10:30 ರಿಂದ

ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ : 21.08.2021 – ಸಂಜೆ 5:30 ಗಂಟೆಯೊಳಗೆ

**3. ಅರ್ಜಿ ಶುಲ್ಕ ವಿವರ**

1) ಸಿವಿಲ್ ಇಂಜಿನಿಯರ್ ಹಾಗೂ ಸಹಾಯಕ ಹುದ್ದೆಗೆ ಅರ್ಜಿ ಶುಲ್ಕ ರೂ.1000/–

2) ಉಪ ಸಿಬ್ಬಂದಿ (ಪ್ಯೂನ್/ಅಟೆಂಡರ್), ಉಪ ಸಿಬ್ಬಂದಿ ಕಮ್ ವಾಹನ ಚಾಲಕ, ಸ್ವೀಪರ್ ಹುದ್ದೆಯ ಅರ್ಜಿ ಶುಲ್ಕ ರೂ.500/–

ಅರ್ಜಿ ಶುಲ್ಕವನ್ನು **'ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., (Karnataka State Souharda Federal Cooperative Ltd.,)** ಈ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ. (ಡಿಮ್ಯಾಂಡ್ ಡ್ರಾಫ್ಟ್) ತೆಗೆದು ಅರ್ಜಿಯೊಂದಿಗೆ ನಿಗದಿತ ದಿನಾಂಕದೊಳಗೆ ಸಂಯುಕ್ತ ಸಹಕಾರಿಗೆ ತಲುಪುವಂತೆ ಕಳುಹಿಸತಕ್ಕದ್ದು.

**4. ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು :**

1) ಹುದ್ದೆಗೆ ನಿಗದಿಪಡಿಸಿದ ಅರ್ಜಿ ಹಾಗೂ ಅರ್ಜಿ ಶುಲ್ಕದ ಡಿ.ಡಿ.

2) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯನ್ನು ರುಜುವಾತುಪಡಿಸುವ ದಾಖಲಾತಿಗಳು. (ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಪಟ್ಟಿಗಳು ಹಾಗೂ ಘಟಿಕೋತ್ಸವದ ಪ್ರಮಾಣ ಪತ್ರಗಳ ಸ್ವಯಂ ದೃಢೀಕರಿಸಿದ ಪ್ರತಿಗಳನ್ನು ಲಗತ್ತಿಸಬೇಕು.)

3) ಹುದ್ದೆಗಳಿಗೆ ನಿಗದಿಪಡಿಸಲಾದ ಅನುಭವವನ್ನು ಹೊಂದಿರುವ ಕುರಿತ ದಾಖಲಾತಿಗಳು.

4) ಕಂಪ್ಯೂಟರ್ ಜ್ಞಾನವನ್ನು ಹೊಂದಿರುವ ಕುರಿತು ಸ್ವಯಂ ದೃಢೀಕರಿಸಿದ ದಾಖಲಾತಿ.

**5. ವಯೋಮಿತಿ :**

1) ಸಹಾಯಕ ಹುದ್ದೆಗೆ : ಕನಿಷ್ಠ 18 ಗರಿಷ್ಠ 36.

2) ಉಪಸಿಬ್ಬಂದಿ ಕಂ ವಾಹನ ಚಾಲಕ ಹುದ್ದೆಗೆ : ಕನಿಷ್ಠ 18 ಗರಿಷ್ಠ 32.

3) ಉಪಸಿಬ್ಬಂದಿ ಹುದ್ದೆಗೆ : ಕನಿಷ್ಠ 18 ಗರಿಷ್ಠ 35.

**6. ಆಯ್ಕೆ ವಿಧಾನ :**

1) ಸಿವಿಲ್ ಇಂಜಿನಿಯರ್ ಹಾಗೂ ಸಹಾಯಕ ಹುದ್ದೆಯ ಆಯ್ಕೆಯನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಮಾಡಲಾಗುತ್ತದೆ. ಲಿಖಿತ ಪರೀಕ್ಷೆಯು, ಹಣಕಾಸು ವಿಷಯ, ಸಹಕಾರ ವಿಷಯ, ವಿದ್ಯಾರ್ಹತಾ ವಿಷಯ ಜ್ಞಾನ, ಭಾಷಾ ಜ್ಞಾನ, ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಬಹು ಆಯ್ಕೆಯ 100 ಅಂಕಗಳ ಪ್ರಶ್ನೆ ಪತ್ರಿಕೆಯನ್ನು ಒಳಗೊಂಡಿರುತ್ತದೆ.

2) ಉಪಸಿಬ್ಬಂದಿ, ಉಪಸಿಬ್ಬಂದಿ ಕಮ್ ವಾಹನ ಚಾಲಕ, ಸ್ವೀಪರ್ ಹುದ್ದೆಯ ಆಯ್ಕೆಯನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಮಾಡಲಾಗುತ್ತದೆ. ಲಿಖಿತ ಪರೀಕ್ಷೆಯು ಬಹು ಆಯ್ಕೆಯ 50 ಅಂಕಗಳ ಪ್ರಶ್ನೆ ಪತ್ರಿಕೆಯನ್ನು ಒಳಗೊಂಡಿರುತ್ತದೆ.

3) ವಾಹನ ಚಾಲಕ ಹುದ್ದೆಗೆ ವಾಹನ ಚಾಲನಾ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲಾಗುತ್ತದೆ.

4) ಲಿಖಿತ ಪರೀಕ್ಷೆ/ಸಂದರ್ಶನ/ಕೌಶಲ್ಯ ಪರೀಕ್ಷೆಗೆ ಕರೆಯಲ್ಪಟ್ಟ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಬೇಕು. ಯಾವುದೇ ಪ್ರಯಾಣ ಭತ್ಯೆ/ದಿನ ಭತ್ಯೆಗಳನ್ನು ನೀಡಲಾಗುವುದಿಲ್ಲ.

5) ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ದಿನಾಂಕ ಮತ್ತು ಸ್ಥಳದ ವಿವರಗಳನ್ನು ಅರ್ಜಿಯಲ್ಲಿ ನಮೂದಿಸಿದ ಇ ಮೇಲ್ ಐಡಿಗೆ ಕಳುಹಿಸುವ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.

**7. ಸಾಮಾನ್ಯ ಸೇವಾ ಷರತ್ತುಗಳು:**

1) ಸಂಯುಕ್ತ ಸಹಕಾರಿಯ ಸೇವೆಗೆ ಆಯ್ಕೆಯಾದ ಅಭ್ಯರ್ಥಿಯು ಎರಡು ವರ್ಷಗಳ ಕಾಲ ಪರೀಕ್ಷಾರ್ಥ ಸೇವಾ ಅವಧಿಯನ್ನು ಹೊಂದಿರುತ್ತಾರೆ.

2) ತೃಪ್ತಿದಾಯಕ ಪರಿಕ್ಷಾರ್ಥ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಯ ಸೇವೆಯನ್ನು ಕ.ರಾ.ಸೌ.ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ನಿರ್ಣಯಕ್ಕೆ ಒಳಪಟ್ಟು ಖಾಯಮಾತಿ ಗೊಳಿಸಲಾಗುತ್ತದೆ.

3) ಸಂಯುಕ್ತ ಸಹಕಾರಿಯ ಸೇವೆಗೆ ಆಯ್ಕೆಯಾದ ಅಭ್ಯರ್ಥಿಗೆ ಆಯಾ ಹುದ್ದೆಗಳಿಗನುಗುಣವಾಗಿ ಆರಂಭದಲ್ಲಿ ಈ ಕೆಳಗಿನಂತೆ ಕ್ರೋಢೀಕೃತ ವೇತನ ಹಾಗೂ ಆಡಳಿತ ಮಂಡಳಿ ಅನುಮೋದನೆಯ ನಂತರದಲ್ಲಿ ಈ ಕೆಳಗಿನಂತೆ ವೇತನ ಶ್ರೇಣಿಯನ್ನು ನೀಡಲಾಗುತ್ತದೆ.

| ಕ್ರ.ಸಂ | ಹುದ್ದೆ | ಕ್ರೋಢೀಕೃತ ವೇತನ | ವೇತನ ಶ್ರೇಣಿ |
|---|---|---|---|
| 1 | ಸಿವಿಲ್ ಇಂಜಿನಿಯರ್ (ವ್ಯವಸ್ಥಾಪಕ ಶ್ರೇಣಿ) | 30,000/– | 16800–400–17200–450–19000–500–21000–600–24600–700–28800–800–29600. |
| 2 | ಸಹಾಯಕರು | 18,000/– | 11600–200–12000–250–13000–300–14200–350–15600–400–17200–450–19000–500–21000. |
| 3 | ಉಪ ಸಿಬ್ಬಂದಿ ಕಮ್ ವಾಹನ ಚಾಲಕ | 16,000/– | 10400–200–12000–250–13000–300–14200–350–15600–400–16400. |
| 4 | ಉಪ ಸಿಬ್ಬಂದಿ (ಪ್ಯೂನ್/ಅಟೆಂಡರ್) | 14,000/– | 9600–200–12000–250–13000–300–14200 –350–14550. |
| 5 | ಸ್ವೀಪರ್ | 12,000/– | 6500–100–8100–150–9600–200–12000–250–13000. |

4) ಅನ್ವಯವಾಗುವ ಹೆಚ್ಚಳ, ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ಮತ್ತು ನಗರ ಪರಿಹಾರ ಭತ್ಯೆಗಳು ಆಡಳಿತ ಮಂಡಳಿಯು ಕಾಲ ಕಾಲಕ್ಕೆ ನಿಗದಿಪಡಿಸಿದ ದರದಲ್ಲಿ ಇರುತ್ತವೆ.

5) ವಿದ್ಯಾರ್ಹತೆ ಹಾಗೂ ಅನುಭವಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

6) ಆಯ್ಕೆಯಾದ ಅಭ್ಯರ್ಥಿಗಳು ರೂ.25000/–ಗಳ ಬಡ್ಡಿರಹಿತ ಭದ್ರತಾ ಠೇವಣಿಯನ್ನು ಸಂಯುಕ್ತ ಸಹಕಾರಿಗೆ ನೀಡಬೇಕು ಹಾಗೂ ರೂ.1,00,000/–ಗಳ ಇಂಡೆಮ್ನಿಟಿ ಬಾಂಡ್ ನೀಡಬೇಕು.

7) ಸಂಯುಕ್ತ ಸಹಕಾರಿಯು ಯಾವುದೇ ಹುದ್ದೆಗೆ ಸಂಬಂಧಿಸಿದಂತೆ ಪ್ರತ್ಯೇಕ ಸೇವಾ ಷರತ್ತುಗಳನ್ನು ವಿಧಿಸಬಹುದಾಗಿದೆ.

8) ಆಯ್ಕೆಯಾದ ಅಭ್ಯರ್ಥಿಗಳು ಸಂಯುಕ್ತ ಸಹಕಾರಿಯ ಸೇವಾ ನಿಯಮಗಳಿಗೆ ಒಳಪಟ್ಟಿರುತ್ತಾರೆ.

9) ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿಯೂ ಯಾವುದೇ ಕಾರಣವನ್ನು ನೀಡದೆ ರದ್ದುಗೊಳಿಸುವ ಅಧಿಕಾರವನ್ನು ಸಂಯುಕ್ತ ಸಹಕಾರಿಯು ಹೊಂದಿರುತ್ತದೆ.

**8. ಸಾಮಾನ್ಯ ಅರ್ಹತಾ ಷರತ್ತುಗಳು:**

1) ಭಾರತೀಯ ನಾಗರೀಕನಾಗಿರತಕ್ಕದ್ದು.

2) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರತಕ್ಕದ್ದು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತನಾಗಿರತಕ್ಕದ್ದು.

3) ದೈಹಿಕವಾಗಿ ಅನರ್ಹರಾಗಿದ್ದಾನೆಂಬುದಾಗಿ ವೈದ್ಯಕೀಯ ಪರೀಕ್ಷೆಯಲ್ಲಿ ಕಂಡುಬಂದಲ್ಲಿ ನೇಮಕಾತಿಯನ್ನು ತಿರಸ್ಕರಿಸುವ ಪೂರ್ಣ ವಿವೇಚನಾಧಿಕಾರವನ್ನು ಸಂಯುಕ್ತ ಸಹಕಾರಿಯು ಕಾದಿರಿಸಿಕೊಂಡಿದೆ.

4) ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ/ ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ/ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಸಹಿ/–

ವ್ಯವಸ್ಥಾಪಕ ನಿರ್ದೇಶಕ

ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ

ದಿನಾಂಕ : 20.07.2021

ಸ್ಥಳ : ಬೆಂಗಳೂರು